**ದಿನಾಂಕ: 13-07-2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲು: ಪ್ರತಿವಾದಿ ನಂ.1, 4 & 5 ರವರ ಪರ ಶ್ರೀ.ವಿ.ಎಸ್.ಪಿ. ವಕೀಲರಿಂದ:**

ವಾದಿಯು ನನ್ನ ದೊಡ್ಡಪ್ಪನ ಮಗ. ವಾದಿಯರು ಒಟ್ಟು 4 ಜನ ಸಹೋದರರು ಇರುತ್ತಾರೆ. ವಾದಿಗೆ ಗೋಜಾಬಾಯಿ ಮತ್ತು ವಲ್ಲಭಬಾಯಿ ಅಂತಾ ಇಬ್ಬರು ಸಹೋದರಿಯರು ಇರುತ್ತಾರೆ. ವಾದಿ ಹಾಗೂ ಅವರ ಸಹೋದರ-ಸಹೋದರಿಯರ ಮಧ್ಯೆ ಆಸ್ತಿಗಳಲ್ಲಿ ವಿಭಾಗವಾಗಿರುತ್ತದೆ. ಸದರಿ ವಿಭಾಗವು ಜುಲೈ-2000 ದಲ್ಲಿ ಆಗಿರುತ್ತದೆ. ಸದರಿ ವಿಭಾಗದ ಸಂದರ್ಭದಲ್ಲಿ ಸಹೋದರಿಯರು ಇರಲಿಲ್ಲ ಮತ್ತು ಸದರಿ ವಿಭಾಗ ವಾದಿ ಮತ್ತು ಆತನ ಸಹೋದರರ ಮಧ್ಯೆ ಮಾತ್ರ ಆಗಿರುತ್ತದೆ. ಸದರಿ ವಿಭಾಗವು ಲಿಖಿತವಾಗಿ ಆಗಿದ್ದು, ಅದನ್ನು ಒಂದು ಬಿಳಿ ಹಾಳೆಯ ಮೇಲೆ ಬರೆಯಾಗಿರುತ್ತದೆ. ಒಂದು ಬಾರಿ ಮಾತ್ರ ವಿಭಾಗ ಆಗಿರುತ್ತದೆ.

ಸದರಿ ವಿಭಾಗವಾದ ಆಸ್ತಿಯು ಪಿತ್ರಾರ್ಜಿತ ಆಸ್ತಿ ಆಗಿರುತ್ತದೆ ಎಂದರೆ ಸರಿ. ಸದರಿ ವಿಭಾಗದಲ್ಲಿ ಯಾವ ಆಸ್ತಿ ವಿಭಾಗವಾಗಿರುತ್ತದೆ ಮತ್ತು ಯಾವ ಆಸ್ತಿ ಯಾರ ಪಾಲಿಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ಆದರೆ, ಸದರಿ ವಿಭಾಗವು ಎಲ್ಲರ ಮಧ್ಯೆ ಸಮಾನವಾಗಿ ಆಸ್ತಿ ಹಂಚಿಕೆ ಆಗಿರುತ್ತದೆ ಎಂದು ನುಡಿಯುತ್ತಾರೆ. ನಾನು ನಿವೃತ್ತ ಸರ್ಕಾರ ನೌಕರ ಇರುತ್ತೇನೆ ಎಂದರೆ ಸರಿ. ನಾನು 33 ವರ್ಷಗಳ ಕಾಲ ಮಹಾರಾಷ್ಟ್ರದ ರಾಜ್ಯದಲ್ಲಿ ಸರ್ಕಾರಿ ಕೆಲಸ ಮಾಡಿರುತ್ತೇನೆ. ಸದರಿ ಅವಧಿಯಲ್ಲಿ ಮಹಾರಾಷ್ಟ್ರದ ಹತ್ತಗಾಂವ, ಬೀಡ, ಉದಗೀರ ಹಾಗೂ ನೀಲಂಗಾದಲ್ಲಿ ಕಾರ್ಯನಿರ್ವಹಿಸಿರುತ್ತೇನೆ.

ವಾದಿಯು ಈ ದಾವೆಯನ್ನು ಜಮೀನು ಸರ್ವೆ ನಂ.48/5 ಕ್ಕೆ ಮಾಲೀಕತ್ವಕ್ಕೆ ಸಂಬಂಧಪಟ್ಟಂತೆ ಪ್ರತಿವಾದಿ ನಂ.1 ರವರ ಮೇಲೆ ಸಲ್ಲಿಸಿರುತ್ತಾನೆ. ಸದರಿ ದಾವಾ ಆಸ್ತಿಯನ್ನು ವಾದಿ & ಪ್ರತಿವಾದಿಯವರು ಜಂಟಿಯಾಗಿ ಖರೀದಿಸಿರುತ್ತಾರೆ. ಸದರಿ ದಾವಾ ಆಸ್ತಿಯ ಬಗ್ಗೆ ಕರಾರು ಪತ್ರದ ಸಮಯದಲ್ಲಾಗಲಿ, ಖರೀದಿ ಪತ್ರ ನೋಂದಣಿ ಮಾಡುವ ಕಾಲಕ್ಕೆ ನಾನು ಹಾಜರಿರಲಿಲ್ಲ. ಸದರಿ ದಾವಾ ಆಸ್ತಿ ಖರೀದಿ ಕಾಲಕ್ಕೆ ಯಾರು ಯಾರು ಹಾಜರಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ದಾವಾ ಆಸ್ತಿಯನ್ನು ಎಷ್ಟು ಹಣ ಕೊಟ್ಟು ಖರೀದಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ದಾವಾ ಆಸ್ತಿಯ ಖರೀದಿಗೆ ವಾದಿ & ಪ್ರತಿವಾದಿ ನಂ.1 ರಿಂದ 3 ರವರು ಎಷ್ಟು ಎಷ್ಟು ಹಣ ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ಬಾವಿ ತೆಗೆಯಲು ವಾದಿ ಮತ್ತು ಪ್ರತಿವಾದಿ ನಂ.1 ರಿಂದ 3 ರವರು ಸಾಲ ಪಡೆದುಕೊಂಡ ಬಗ್ಗೆ ಯಾವುದಾದರೂ ಕರಾರು ಇದೆ ಎಂದರೆ ಸಾಕ್ಷಿಯು ಬಾವಿ ಮತ್ತು ಹೊಲ ಖರೀದಿಸಲು ಸೇರಿ ಸಾಲ ಮಾಡಿರುತ್ತಾರೆ, ಆದರೆ ಅದರ ಬಗ್ಗೆ ದಾಖಲಾತಿ ಇರುವುದಿಲ್ಲ. ದಾವಾ ಆಸ್ತಿಯ ಸರ್ವೇ ನಂಬರಗೆ ಸಂಬಂಧಪಟ್ಟಂತೆ ವಾದಿ ಹಾಗೂ ಪ್ರತಿವಾದಿ ನಂ.1 ರಿಂದ 3 ರವರ ಮಧ್ಯೆ ಈಗಾಗಲೇ ವಿಭಾಗವಾಗಿದ್ದು, ಅದರಲ್ಲಿ ಪ್ರತಿವಾದಿ ನಂ.1 ರವರಿಗೆ 1 ಎಕರೆ 6 ಗುಂಟೆ ಹಾಗೂ ವಾದಿ ಮತ್ತು ಪ್ರತಿವಾದಿ ನಂ.2 & 3 ರವರಿಗೆ ತಲಾ 1 ಎಕರೆ ಜಮೀನು ಪಾಲಿಗೆ ಬಂದಿರುತ್ತದೆ. ವಾದಿ ಪಾಲಿಗೆ ಬಂದ 1 ಎಕರೆ ಜಮೀನಿನ ಚೆಕ್ ಬಂದಿಯನ್ನು ನನಗೆ ಹೇಳಲು ಬರುವುದಿಲ್ಲ. ಅದೇ ರೀತಿ ಪ್ರತಿವಾದಿ ನಂ.1 ರಿಂದ 3 ರವರ ಪಾಲಿಗೆ ಬಂದ ಜಮೀನುಗಳ ಚೆಕ್‌ಬಂದಿ ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಯ ಸರ್ವೇ ನಂಬರಿನಲ್ಲಿ ವಿಭಾಗ ಆದ ಬಗ್ಗೆ ವಾಟ್ನಿ ಪತ್ರವನ್ನು ಲಿಖಿತವಾಗಿ ಮಾಡಿರುವುದಿಲ್ಲ.

ಪ್ರತಿವಾದಿ ನಂ.2 & 3 ರವರು ತಮ್ಮ ಪಾಲಿಗೆ ಬಂದ ಜಮೀನುಗಳ ಬಗ್ಗೆ ಯಾವುದಾದರೂ ದಾವೆ ಸಲ್ಲಿಸಿದ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ವಾದಿ & ಪ್ರತಿವಾದಿ ನಂ.1 ರಿಂದ 3 ರವರು ಜಂಟಿಯಾಗಿ ಖರೀದಿಸಿರುತ್ತಾರೆ ಮತ್ತು ಸದರಿ ಜಮೀನನ್ನು ಖರಿದಿಸಲು ಮತ್ತು ಬಾವಿಯನ್ನು ತೆಗೆಸಲು ವಾದಿ & ಪ್ರತಿವಾದಿಯವರು ಸಾಲ ಪಡೆದುಕೊಂಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ಧೇನೆ ಎಂದರೆ ಸರಿಯಲ್ಲ. ನಾನು ಮಹಾರಾಷ್ಟ್ರ ರಾಜ್ಯದಲ್ಲಿ ಕೆಲಸ ಮಾಡುತ್ತಿದ್ದರಿಂದ ದಾವಾ ಆಸ್ತಿಯನ್ನು ಯಾವಾಗ & ಯಾರು ಖರೀದಿಸಿರುತ್ತಾರೆ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಂ.1 ರವರು ತಮ್ಮ ತಮ್ಮ ಸ್ವಂತ ಆದಾಯದಿಂದ ಸರ್ವೇ ನಂ.48/5 ರಲ್ಲಿ ಒಟ್ಟು 4 ಎಕರೆ 6 ಗುಂಟೆ ಜಮೀನನ್ನು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಮೀನನ್ನು ಪ್ರತಿವಾದಿ ನಂ.1 ರವರು ತಮ್ಮ ಹೆಸರಿಗೆ ನೊಂದಣಿ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ವಾದಿ & ಪ್ರತಿವಾದಿ ನಂ.1 ರಿಂದ 3 ರವರು ಸೇರಿ ಸದರಿ ಜಮೀನನ್ನು ಪ್ರತಿವಾದಿ ನಂ.1 ರವರ ಹೆಸರಿಗೆ ಖರೀದಿ ನೋಂದಣಿ ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ.

ನಂತರ ಪ್ರತಿವಾದಿ ನಂ.1 ರವರು ಸದರಿ ಸರ್ವೇ ನಂ.48/5 ರಲ್ಲಿ ತನ್ನ ಮಕ್ಕಳಿಗೆ ವಿಭಾಗ ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಅದು ತಪ್ಪಾಗಿ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ವಾದಿ & ಪ್ರತಿವಾದಿ ನಂ.2 & 3 ರವರು ಸೇರಿ ಪ್ರತಿವಾದಿ ನಂ.1 ರವರು ಅನಕ್ಷರಸ್ಥ ಇದ್ದು, ಅದನ್ನು ದುರುಪಯೋಗ ಪಡಿಸಿಕೊಂಡು ದಾವಾ ಅಸ್ತಿಯನ್ನು ಕಬಳಿಸಲು ಪ್ರತಿವಾದಿ ನಂ.1 ರವರ ವಿರುದ್ದ ಸುಳ್ಳು ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.1 ರವರು ಅನಕ್ಷರಸ್ಥರಿದ್ದು, ಬ್ಯಾಂಕಿನಲ್ಲಿ ಸಾಲ ಪಡೆಯುವುದು ಇದೆ ಅಂತಾ ಹೇಳಿ ಬಿಳಿ ಹಾಳೆಯ ಮೇಲೆ ಆತನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ವಾದಿ ಮತ್ತು ಪ್ರತಿವಾದಿ ನಂ.2 & 3 ರವರು ನನಗೆ ನ್ಯಾಯಾಲಯಕ್ಕೆ ಹೋಗಿ ಸುಳ್ಳು ಸಾಕ್ಷಿ ಹೇಳು ಅಂತಾ ಹೇಳಿದ ಮೇರೆಗೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ಪಾಟೀ ಸವಾಲು : 2 & 3 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಇಲ್ಲ ಅಂತಾ ತಿಳಿಸಿರುತ್ತಾರೆ.)**

**(ಮರು ವಿಚಾರಣೆ ಇರುವುದಿಲ್ಲ.)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**(ಓ.ಹೇ.ಕೇ.ಸ.ಇದೆ)**

**ದಿವಾಣಿ ನ್ಯಾಯಾಧೀಶರು**
**ಬಸವಕಲ್ಯಾಣ.**

**ಸಾಕ್ಷಿದಾರರ ಸಹಿ:-**